ದಿನಾಂಕ 03.09.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಬಿ.ಕೆ.ಡಿ.ಆರ್ ವಕೀಲರಿಂದಃ

ನಾನು 8ನೇ ತರಗತಿಯವರೆಗೆ ಬಾಳೆಹೊಳೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬಾಳೆಹೊಳೆಯಲ್ಲಿದ್ದ ನಮ್ಮ ಮನೆಯಿಂದ ಶಾಲೆಗೆ ಹೋಗಿ ಬರುತ್ತಿದ್ದೆ. ನಮ್ಮ ಮನೆಯಲ್ಲಿ ನಾನು ಇಬ್ಬರು ಅಣ್ಣಂದಿರು ಮತ್ತು ನನ್ನ ಅಕ್ಕ, ಅಪ್ಪ ಮತ್ತು ಅಮ್ಮ ಇದ್ದೆವು. ನನ್ನ ಅಕ್ಕ 10ನೇ ತರಗತಿಯವರೆಗೆ ಬಾಳೆಹೊಳೆಯಲ್ಲಿರುವ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ ಇಬ್ಬರು ಸಹೋದರರ ಹೆಸರು ಸಂದೇಶ ಮತ್ತು ಸಂತೋಷ ಎಂದು. ಅವರು ಸಹ ವಿದ್ಯಾಭ್ಯಾಸ ಮಾಡಿದ್ದಾರೆ. ಅವರಲ್ಲಿ ಒಬ್ಬ 10ನೇ ತರಗತಿ ಇನ್ನೊಬ್ಬರು 12ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ.

2. ನಾನು ಮದುವೆಯಾಗಿ 12 ವರ್ಷಗಳಾಗಿರುತ್ತವೆ. ನನ್ನ ಅಕ್ಕನಿಗೆ ಮದುವೆಯಾಗಿ 13 ವರ್ಷಗಳಾಗಿರುತ್ತವೆ. ನನ್ನ ಮದುವೆಯಾಗುವಾಗ ನನ್ನ ಸಹೋದರ ಸಂದೇಶ ಮರಣಹೊಂದಿದ್ದರು, ಇನ್ನೊಬ್ಬ ಸಹೋದರ ನನ್ನ ಮದುವೆಯಾದ 9 ತಿಂಗಳ ನಂತರ ಮರಣಹೊಂದಿರುತ್ತಾರೆ. ಬಾಳೆಹೊಳೆಯಲ್ಲಿ ನನ್ನ ತಾಯಿಯ ಹೆಸರಿನಲ್ಲಿ 1.20 ಎಕರೆ ಜಮೀನು ಇರುತ್ತದೆ. ನನ್ನ ತಂದೆಗೆ ಅವರ ಹೆಸರಿನಲ್ಲಿ ಯಾವುದೇ ಜಾಗ ಇರುವುದಿಲ್ಲ. ನನ್ನ ಸಹೋದರರು ಅಪಘಾತದಲ್ಲಿ ಮರಣಹೊಂದಿದ ನಂತರ ಅವರ ಪರಿಹಾರದ ಹಣದಲ್ಲಿ ಒಬ್ಬನದು ಮಾತ್ರ ಸಿಕ್ಕಿತ್ತು ಅದನ್ನು ನಮ್ಮ ಮದುವೆಗೆ ಖರ್ಚು ಮಾಡಿರುತ್ತಾರೆ. ಮತ್ತೊಬ್ಬ ಸಹೋದರನ ಅಪಘಾತದ ಪರಿಹಾರ ಹಣವು ಸಹ ಸಿಕ್ಕಿತ್ತು. ನಮ್ಮ ಮದುವೆಯನ್ನು ತಂದೆ ತಾಯಿ ಸೇರಿ ಮಾಡಿದ್ದಾರೆ. ನಾವು ಶಾಲೆಗೆ ಹೋಗುವಾಗ, ಮದುವೆಯಾದಾಗ, ನನಗೆ ಹೆರಿಗೆಯಾದ ಸಮಯ ನನ್ನ ತಂದೆ ತಾಯಿ ಬಾಳೆಹೊಳೆಯಲ್ಲಿ ನಮ್ಮ ಮನೆಯಲ್ಲಿ ವಾಸವಿದ್ದರು. ತಂದೆಯವರು ಅರ್ಜಿದಾರರ ಹೆಸರಿನಲ್ಲಿ ಕೆನರಾ ಬ್ಯಾಂಕಿನಲ್ಲಿ ಎಷ್ಟು ಹಣ ಇಟ್ಟಿದ್ದರು ಎಂದರೆ ಸಾಕ್ಷಿ ಕಳಸದ ಕೆನರಾ ಬ್ಯಾಂಕಿನಲ್ಲಿ ರೂ. 1,80,000/- ಇಟ್ಟಿದ್ದರು ಎಂದು ಹೇಳುತ್ತಾರೆ. ಆ ಹಣವನ್ನು ಅರ್ಜಿದಾರರು ನಾನು ಮತ್ತು ನನ್ನ ಗಂಡ ಸೇರಿ ನಗದೀಕರಣ ಮಾಡಿಕೊಂಡಿರುತ್ತೇವೆ. ಕೆನರಾ ಬ್ಯಾಂಕಿನಲ್ಲಿ ಎದುರುದಾರರು ಅರ್ಜಿದಾರರ ಹೆಸರಿನಲ್ಲಿ ರೂ. 3,75,000/- ಗಳನ್ನು ಠೇವಣಿಯಾಗಿ ಇಟ್ಟಿದ್ದಾರೆ ಎಂದರೆ ಹೌದು. ನನ್ನ ಹೆಸರಿನಲ್ಲಿ ಸಹ

ಎದುರುದಾರರು ರೂ. 50,000/- ಇಟ್ಟಿದ್ದು ಅದನ್ನು ಒಂದು ತಿಂಗಳ ಮುಂಚೆ ತೆಗೆದುಕೊಂಡಿದ್ದೇವೆ.

3. ಎರಡನೇ ಮಗು ಸುಶಾಂಕ್ ಜನನ ಆದಾಗ ಮೂರು ತಿಂಗಳು ನಾನು ನನ್ನ ತಂದೆ ತಾಯಿಯ ಜೊತೆ ಬಾಳೆಹೊಳೆಯಲ್ಲಿ ಇದ್ದೆ. ಆನಂತರ ನಾನು ನನ್ನ ಗಂಡನ ಮನೆಗೆ ಹೋಗಿರುತ್ತೇನೆ ಎಂದರೆ ಹೌದು. ನನ್ನ ತಾಯಿಯ ಮನೆಯಲ್ಲಿದ್ದಾಗ ತಂದೆ ತಾಯಿ ಚೆನ್ನಾಗಿ ನೋಡಿಕೊಂಡಿದ್ದಾರಾ ಎಂದರೆ ಸಾಕ್ಷಿ ತಾಯಿ ಚೆನ್ನಾಗಿ ನೋಡಿಕೊಂಡಿದ್ದಾರೆ, ತಂದೆ ಹೊಡೆಯುವುದು ಬಡೆಯುವುದು ಮಾಡುತ್ತಿದ್ದರು ಎಂದು ಹೇಳುತ್ತಾರೆ. ತಂದೆ ಹೊಡೆಯವುದು ಬಡೆಯುವುದು ಮಾಡುತ್ತಿದ್ದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದ್ದೇನೆ. ಮೂರು ತಿಂಗಳ ನಂತರ ನಾನು ನನ್ನ ಗಂಡನ ಮನೆಗೆ ಹೋದ ನಂತರವು ನನ್ನ ದೊಡ್ಡ ಮಗ ನನ್ನ ತಂದೆ ತಾಯಿಯ ಜೊತೆಯಲ್ಲಿ ವಾಸವಿದ್ದೆ ಎಂದರೆ ಸರಿ. ನನ್ನ ದೊಡ್ಡ ಮಗ ಬಾಳೆಹೊಳೆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ನನ್ನ ದೊಡ್ಡ ಮಗ ಕಳಸದ ಪ್ರಮೋದಿನಿ ಶಾಲೆಯಲ್ಲಿ ಓದುತ್ತಿದ್ದ ಎಂದರೆ ಸಾಕ್ಷಿ ಅಲ್ಲಿ ಒಂದು ವರ್ಷ ಓದಿರುತ್ತಾನೆ, ಕೊರೋನಾ ಬಂದ ನಂತರದಲ್ಲಿ ಬಾಳೆಹೊಳೆ ಕಳೆಭಾಗ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾನೆ ಎಂದು ಹೇಳುತ್ತಾರೆ. ನನ್ನ ತಾಯಿಯ ಮನೆಯಿಂದಲೇ ಶಾಲೆಗೆ ಹೋಗಿ ಬರುತ್ತಿದ್ದ ಎಂದರೆ ಸರಿ. ನನ್ನ ಮಗನ ವಿದ್ಯಾಭ್ಯಾಸದ ಖರ್ಚನ್ನು ನನ್ನ ತಂದೆಯವರೇ ಭರಿಸುತ್ತಿದ್ದರು ಎಂದರೆ ಹೌದು, ನಾವು ಸಹ ಭರಿಸುತ್ತಿದ್ದೆವು.

4. ನನ್ನ ತಂದೆಯವರಿಗೆ ಈಗ 56 ವರ್ಷ ಪ್ರಾಯ. ತಂದೆಗೆ 60 ವರ್ಷ ಎಂದರೆ ಇರಬಹುದು. ತಂದೆಯನ್ನು ನೋಡಿಕೊಳ್ಳಬೇಕಾದುದು ಮಕ್ಕಳ ಕರ್ತವ್ಯ ಎಂದರೆ ಹೌದು. ತಂದೆಯವರಿಗೆ ಖರ್ಚಿಗೆ ಹಣ ಕೊಡುತ್ತೀರಾ ಎಂದರೆ ಇಲ್ಲ. ಎದುರುದಾರರಿಗೆ ಹೊಟ್ಟೆ ಆಪರೇಷನ್ ಆಗಿ ಒಂದು ವರ್ಷಗಳಾಗಿರುತ್ತದೆ. ಆಸ್ಪತ್ರೆಗೆ ನೋಡಿಕೊಳ್ಳಲು ನಾವು ಹೋಗಿರುವುದಿಲ್ಲ ನಮ್ಮ ಮನೆಯವರು ಹೋಗಿರುತ್ತಾರೆ. ಅರ್ಜಿದಾರರು ನೋಡಿಕೊಂಡಿದ್ದಾರಾ ಎಂದರೆ ಇಲ್ಲ. ಎಷ್ಟು ಸಮಯದವರೆಗೆ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸಾಕ್ಷಿ 3 ರಿಂದ 4 ದಿನಗಳು ಇದ್ದರು ಎಂದು ಹೇಳುತ್ತಾರೆ. ಎದುರುದಾರರು 1½ ತಿಂಗಳು ಆಸ್ಪತ್ರೆಯಲ್ಲಿ ಇದ್ದರು ಎಂದು ಅನುಭವ ಕೊಡುತ್ತಾರೆ ಎಂದರೆ ಸರಿಯಲ್ಲ. ಯಾವ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಗೊತ್ತಿಲ್ಲ. ಚಿಕ್ಕಮಗಳೂರಿನ ಆಶೀರ್ವಾದ್ ಆಸ್ಪತ್ರೆಯಲ್ಲಿ ಮಲಗಿದ್ದಾಗ ಅವರನ್ನು ವಿಚಾರ ಮಾಡಲು ನಾನಾಗಲಿ ಅರ್ಜಿದಾರರಾಗಲಿ ಹೋಗಿರುವುದಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ ಮಲಗಿದ್ದಾಗ ಎದುರುದಾರರ ಶುಶ್ರುಷವನ್ನು

ಆರೈಕೆಯನ್ನು ನಾವು ಮಾಡಿರುವುದಿಲ್ಲ ಎಂದರೆ ಹೌದು. ಚಿಕಿತ್ಸೆಗೆ ಎಷ್ಟು ವೆಚ್ಚ ಆಗಿದೆ ಎಂದು ನೀವಾಗಲಿ ಅರ್ಜಿದಾರರಾಗಲಿ ಕೇಳಿದ್ದೀರಾ ಎಂದರೆ ಹೌದು. ಸಾಕ್ಷಿ ಮುಂದುವರಿದು ನಮ್ಮಿಂದ ರೂ. 15,000/- ಗಳನ್ನು ಪಡೆದಿದ್ದಾರೆ ಎಂದು ಹೇಳುತ್ತಾರೆ. ನಾನಾಗಲಿ ಅರ್ಜಿದಾರರಾಗಲಿ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಹೆಸರಿನಲ್ಲಿ ಇರುವ ಸ್ವತ್ತಿನಲ್ಲಿ ಕಾಫಿ, ಅಡಿಕೆ, ಮೆಣಸು ಇರುತ್ತದೆ. ಅದರಿಂದ ಎಷ್ಟು ಉತ್ಪತ್ತಿ ಬರುತ್ತದೆ ಎಂದು ಗೊತ್ತಿಲ್ಲ. ಅದರ ಉತ್ಪತ್ತಿಯನ್ನು ಅರ್ಜಿದಾರರು ತೆಗೆಯುತ್ತಿದ್ದರು ಎಂದರೆ ಸರಿಯಲ್ಲ, ಎದುರುದಾರರೇ ತೆಗೆಯುತ್ತಿದ್ದರು.

5. ನನ್ನ ಪ್ರಮಾಣ ಪತ್ರವನ್ನು ತಯಾರು ಮಾಡಲು ವಕೀಲರಿಗೆ ನಾನೇ ಅನುಭವ ಕೊಟ್ಟಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ಗೊತ್ತಾ ಎಂದರೆ ಹೌದು. ಅರ್ಜಿದಾರರಿಗೆ ಎದುರುದಾರರು ಯಾವಾಗ ರಾಡಿನಿಂದ ಹೊಡೆದಿದ್ದಾರೆ ಎಂದರೆ ಸಾಕ್ಷಿ ಡಿಸೆಂಬರ್ 2021 ರಲ್ಲಿ ನಾನು ಬಾಣಂತನಕ್ಕೆಂದು ಹೋದಾಗ ಹಲ್ಲೆ ಮಾಡಿದ್ದಾರೆ ಎಂದು ಹೇಳುತ್ತಾರೆ. ನನಗೆ ಇಬ್ಬರು ಮಕ್ಕಳು. ಸಾಮಾನ್ಯವಾಗಿ ಬಾಣಂತನವನ್ನು ಮಗು ಹುಟ್ಟಿ 3 ತಿಂಗಳು ಅಥವಾ 4 ತಿಂಗಳು ಮಾಡುತ್ತಾರಾ ಎಂದರೆ ಸಾಕ್ಷಿ 3 ತಿಂಗಳು ಎಂದು ಹೇಳುತ್ತಾರೆ. 2021 ರಲ್ಲಿ ಎದುರುದಾರರ ಜೊತೆ ನಾನು ವಾಸವಿರಲಿಲ್ಲ ಆ ಸಮಯದಲ್ಲಿ ಬಾಣಂತನವು ಇರಲಿಲ್ಲ ಎಂದರೆ ಸರಿ. ಎದುರುದಾರರು ಅರ್ಜಿದಾರರಿಗೆ ಹಲ್ಲೆ ಮಾಡಿದಾಗ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೀರಾ ಎಂದರೆ ಸಾಕ್ಷಿ ಒಂದು ಬಾರಿ ಕೊಡಿಸಿದ್ದೇವೆ ಎಂದು ಹೇಳುತ್ತಾರೆ. ಎಲ್ಲಿ ಎಂದರೆ ಸಾಕ್ಷಿ ಬಾಳೆಹೊಳೆ ಸರ್ಕಾರಿ ಆಸ್ಪತ್ರೆಯಲ್ಲಿ ಎಂದು ಹೇಳುತ್ತಾರೆ. ಅರ್ಜಿದಾರರ ಹೆಸರಿನಲ್ಲಿ ಕರ್ನಾಟಕ ಬ್ಯಾಂಕಿನಲ್ಲಿ ಎಂದು ಉಳಿತಾಯ ಖಾತೆ ಇರುತ್ತದೆ ಎಂದರೆ ಗೊತ್ತಿಲ್ಲ. ಕೆನರಾ ಬ್ಯಾಂಕಿನಲ್ಲೂ ಸಹ ಒಂದು ಖಾತೆ ಇದ್ದು ಅದರಲ್ಲಿದ್ದ ಹಣವನ್ನು ನಾನು ಮತ್ತು ನನ್ನ ಗಂಡ ತೆಗೆಯುತ್ತಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರ ಹೆಸರಿನಲ್ಲಿ ಎದುರುದಾರರು ಇಟ್ಟ ಹಣವನ್ನು ನಾನು ಮತ್ತು ನನ್ನ ಗಂಡ ತೆಗೆದು ಅರ್ಜಿದಾರರಿಗೆ ಕೊಡುತ್ತಿದ್ದೇವೆ ಎಂದರೆ ಸರಿ.

6. ಅರ್ಜಿದಾರರು ಎದುರುದಾರರಿಗೆ ಹೇಳದೆ ಅವರ ತವರು ಮನೆಗೆ ಬಂದಾಗ ನಾನು ನನ್ನ ತಾಯಿಯ ಮನೆಯಲ್ಲೆ ಇದ್ದೆ. ಎದುರುದಾರರಿಗೆ ಅರ್ಜಿದಾರರು ತವರು ಮನೆಗೆ ಹೋಗಿದ್ದಾರೆ ಎಂದು ಹೇಳಿದ್ದೇನೆ. ಎದುರುದಾರರು ಪೊಲೀಸ್ ಠಾಣೆಗೆ ದೂರು ನೀಡಿದ ನಂತರ ಅರ್ಜಿದಾರರು ತಾಯಿಯ ಮನೆಗೆ ಹೋಗಿದ್ದಾರೆ ಎಂದು ಗೊತ್ತಾಗಿದೆ ಎಂದರೆ ಸಾಕ್ಷಿ ಅದಕ್ಕೂ ಮುಂಚೆ ಹೇಳಿದ್ದೇನೆ ಎಂದು ಹೇಳುತ್ತಾರೆ. ನನ್ನ ಮಾವನವರು ಅರ್ಜಿದಾರರನ್ನು ಊರಿಗೆ ಕರೆದುಕೊಂಡು ಹೋದಾಗ

ಎದುರುದಾರರು ಪೊಲೀಸ್ ದೂರನ್ನು ಕೊಟ್ಟಿರುತ್ತಾರೆ. ಹಾಗೆ ಕರೆದುಕೊಂಡು ಹೋಗುವಾಗ ನಾನು ನನ್ನ ತಾಯಿಯ ಜೊತೆಯಲ್ಲಿ ಇದ್ದೆ. ತಾಯಿ ತವರು ಮನೆಗೆ ಬಂದ ನಂತರ ಮರುದಿನ ನನ್ನ ಮಗನನ್ನು ಶಾಲೆಯಿಂದ ಬಿಡಿಸಿ ನನ್ನ ಗಂಡನ ಮನೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಎದುರುದಾರರು ಬಾಳೆಹೊಳೆಯಲ್ಲಿ ಒಬ್ಬರೇ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಯೋಗ ಕ್ಷೇಮವನ್ನು ವಿಚಾರಿಸಿದ್ದೀರಾ ಎಂದರೆ ಇಲ್ಲ. ನನ್ನ ಅಕ್ಕ ಈಗಲೂ ಸಹ ಎದುರುದಾರರೊಂದಿಗೆ ಮನೆಗೆ ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಅಕ್ಕನ ಜೊತೆ ಮಾತನಾಡುವುದಿಲ್ಲ. ಯಾವ ಕಾರಣಕ್ಕೆ ಎಂದರೆ ಆಕೆಯೂ ಮಾತನಾಡುವುದಿಲ್ಲ, ನಾನು ಸಹ ಮಾತನಾಡುವುದಿಲ್ಲ ಎಂದು ಹೇಳುತ್ತಾರೆ. ನನ್ನ ಅಕ್ಕ ಎದುರುದಾರರನ್ನು ಕಾಳಜಿ ಮಾಡುತ್ತಾರೆ, ಮನೆಗೆ ಹೋಗುತ್ತಾರೆ ಎಂಬ ಕಾರಣದಿಂದ ನನಗೂ ಮತ್ತು ಅರ್ಜಿದಾರರಿಗೆ ನನ್ನ ಅಕ್ಕನನ್ನು ಕಂಡರೆ ಆಗುವುದಿಲ್ಲ ಎಂದರೆ ಸಾಕ್ಷಿ ನಾನು ಅರ್ಜಿದಾರರನ್ನು ಕರೆದುಕೊಂಡು ಹೋಗಿದ್ದೇನೆ ಎಂದು ನನ್ನ ಮೇಲೆ ಸಿಟ್ಟು ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಜೀವನಾಂಶ ಕೊಡಲು ಇಲ್ಲಿಯವರೆಗೆ ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಕೈಲಾದಷ್ಟು ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ಅರ್ಜಿದಾರರ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿದ್ದೇವೆ. ಎದುರುದಾರರು ಬಿದ್ದು ಕೈ ಮತ್ತು ಕಾಲಿನ ಮೂಳೆ ಮುರಿದ ವಿಚಾರ ನನಗೆ ಗೊತ್ತಿಲ್ಲ. ಎದುರುದಾರರು ಕೂಲಿ ಕೆಲಸ ಮಾಡಿಕೊಂಡು ಬದುಕುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು ನನ್ನ ಗಂಡ ಹಾಗೂ ಅರ್ಜಿದಾರರು ಸೇರಿ ಬಾಳೆಹೊಳೆಯಲ್ಲಿ ಅರ್ಜಿದಾರರ ಹೆಸರಿನಲ್ಲಿರುವ ಸ್ವತ್ತಿನ ಉತ್ಪತ್ತಿಯನ್ನು ನಾವೇ ತೆಗೆಯುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಜಾಗದ ಉಸ್ತುವಾರಿಯನ್ನು ಎದುರುದಾರರ ತಮ್ಮ ಮಾಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ಆದಾಯ ಇಲ್ಲದೆ ಕೂಲಿ ಕೆಲಸ ಮಾಡಿಕೊಂಡು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆಯವರು ಅರ್ಜಿದಾರರ ಜೊತೆ ಸೇರಿ ಜೀವನವನ್ನು ನಡೆಸಬೇಕೆಂದು ಪರಿಹಾರ ಕೋರಿ ಅರ್ಜಿ ಸಲ್ಲಿಸಿದ ವಿಚಾರ ಗೊತ್ತಾ ಎಂದರೆ ಇಲ್ಲ. ಅರ್ಜಿದಾರರಿಗೆ ಎದುರುದಾರರ ಜೊತೆ ದಾಂಪತ್ಯ ಜೀವನ ನಡೆಸಲು ಮನಸ್ಸಿಲ್ಲ ಎಂದರೆ ಸರಿ. ಎದುರುದಾರರಿಗೆ ಪ್ರಾಯವಾಗಿದ್ದು ಅವರನ್ನು ನೋಡಿಕೊಳ್ಳಲು ಅರ್ಜಿದಾರರಿಗೆ ಮನಸ್ಸಿಲ್ಲ ಎಂದರೆ ಸರಿ. ಎದುರುದಾರರು ಅರ್ಜಿದಾರರನ್ನು ಹಲವಾರು ಬಾರಿ ಮನೆಗೆ ಬರುವಂತೆ ಕರೆದರೂ ಅರ್ಜಿದಾರರು ಬರಲು ತಯಾರಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯವಾಗಲಿ ಎಂದು ಅವರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಅರ್ಜಿದಾರರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಲ್ಲೆ ಮಾಡಿಲ್ಲ ಮತ್ತು ಬೈದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ದೈಹಿಕವಾಗಿ ಆರೋಗ್ಯವಾಗಿದ್ದಾಗ ನನ್ನ, ನನ್ನ ಅಕ್ಕನ, ನನ್ನ ಸಹೋದರರ

ವಿದ್ಯಾಭ್ಯಾಸವನ್ನು, ನನ್ನ ಮತ್ತು ನನ್ನ ಅಕ್ಕನ ವಿವಾಹವನ್ನು ಮಾಡಿ ಚೆನ್ನಾಗಿ ನೋಡಿಕೊಂಡು ಬಂದಿದ್ದಾರೆ ಎಂದರೆ ಸಾಕ್ಷಿ ಎದುರುದಾರರು ಒಂದು ರೂಪಾಯಿಯನ್ನು ನೀಡಿಲ್ಲ ಎಲ್ಲವನ್ನೂ ನಾವೇ ನೋಡಿಕೊಂಡು ಬಂದಿದ್ದೇವೆ ಎಂದುಹೇಳುತ್ತಾರೆ. ಸತ್ಯ ಮರೆಮಾಚಿ ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ಆರೋಗ್ಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು

(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ